ಪಿಡಬ್ಲ್ಯೂ-1

**ಸಾಕ್ಷಿಯನ್ನು ದಿ :21-01-2018 ರಂದು ಕರೆಸಿ ಪ್ರಮಾಣೀಕರಿಸಲಾಯಿತು .**

**ಮುಖ್ಯ ವಿಚಾರಣೆ** : ಅರ್ಜಿದಾರರ ಪರ ಶ್ರೀ.ಆರ್.ಎಸ್.ಎಮ್. ವಕೀಲರಿಂದ-

ನಾನು ಈ ಪ್ರಕರಣದಲ್ಲಿ ಅರ್ಜಿದಾರನಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆಗೆ ಸಂಬಂಧಿಸಿದಂತೆ ನನ್ನ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಇರುವ ಅಂಶಗಳು ಸತ್ಯವಾಗಿರುತ್ತವೆ.

ನನ್ನ ಅರ್ಜಿಗೆ ಸಂಬಂಧಿಸಿದಂತೆ ಈ ದಿನ ಈ ಕೆಳಕಂಡ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತಿದ್ದೇನೆ. ಅವುಗಳನ್ನು ಈ ಕೆಳಗಿನಂತೆ ನಿಶಾನಿಕರಿಸಲಾಗಿದೆ.

| | | |
|---|---|---|
| 1. | ನಿಪಿ-1 : | ಅಲಭ್ಯ ಪ್ರಮಾಣ ಪತ್ರ. |
| 2. | ನಿಪಿ-2 ಮತ್ತು 3: | ಭೂ ಆಕರಣಾ ಯಾದಿಗಳು. |
| 3. | ನಿಪಿ-4 : | ಪಹಣಿ ಪತ್ರಿಕೆ. |
| 4. | ನಿಪಿ: 5 : | ನನಗೆ ಸಂಬಂಧಿಸಿದ ಶಾಲಾ ದಾಖಲಾತಿ ಪ್ರಮಾಣ ಪತ್ರ. |
| 5. | ನಿಪಿ: 6 : | ನನ್ನ ತಾಯಿ ಹನುಮವ್ವರವರ ಪ್ರಮಾಣ ಪತ್ರ. |
| 6. | ನಿಪಿ: 7 : | ನೋಟರಿಯವರ ಕಾರ್ಯಗತ ಮಾಡಿದ ವಂಶಾವಳಿ ಪ್ರಮಾಣ ಪತ್ರ. |
| 7. | ನಿಪಿ: 8 : | ಆಧಾರ್ ಕಾರ್ಡ್ ನೋಟರಿಕೃತ ದಾಖಲೆ. |
| 8. | ನಿಪಿ: 9 : | ಚುನಾವಣಾ ಆಯೋಗದವರು ನೀಡಿದ ಗುರುತಿನ ಚೀಟಿಯ ನೋಟರಿಕೃತ ದಾಖಲೆ. |

ವಾರಸಾ ಪ್ರಮಾಣ ಪತ್ರವನ್ನು ಪಡೆಯಲು ಮತ್ತು ಇತರ ಕಂದಾಯ ದಾಖಲಾತಿಗಳನ್ನು ಪಡೆದುಕೊಳ್ಳಲು ನನ್ನ ತಂದೆಯವರ ಮರಣ ಪ್ರಮಾಣ ಪತ್ರವನ್ನು ಪಡೆಯುವ ಅವಶ್ಯಕತೆ ಇದೆ.

ನನ್ನ ಮುಖ್ಯ ವಿಚಾರಣಾ ಸಾಕ್ಷ್ಯ ಹಾಗೂ ದಸ್ತಾವೇಜುಗಳನ್ನು ಪರಿಶೀಲಿಸಿ ನನ್ನ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿಕೊಳ್ಳುತ್ತೇನೆ.

**ಪಾಟೀ ಸವಾಲು :** ಎದುರುದಾರರು ಏಕಪಕ್ಷೀಯ.

**ಮರು ವಿಚಾರಣೆ:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

ಹಿರಿಯ ದಿವಾಣಿ ನ್ಯಾಯಾಧೀಶರು, ರೋಣ